ಆ) ಈ ಯೋಜನೆಗೆ ದೊರೆಯುವ ಅನುದಾನದ ಹಣ ಎಷ್ಟು ?

ಇ) ಶಿವಮೊಗ್ಗದ ಯಾವ ಪ್ರದೇಶದಲ್ಲಿ ಆ ಯೋಜನೆಗೆ ಪ್ರಯತ್ನ ನಡೆದಿದೆ ?

ಈ) ಅದನ್ನು ಯಾವಾಗ ಪ್ರಾರಂಭಿಸಲಾಗುವುದು ಮತ್ತು ಯಾವಾಗ ಮುಕ್ತಾಯಗೊಳಿಸಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮಂತ್ರಿಗಳು) :–

ಆ) ಹೌದು.

ಆ) ಆನಾವರ್ತ ವೆಚ್ಚಕ್ಕಾಗಿ ರೂ. 291 ಲಕ್ಷ ಹಣವನ್ನು, ಮತ್ತು ಆವರ್ತ ವೆಚ್ಚಕ್ಕಾಗಿ, ಪ್ರತಿವರ್ಷಕ್ಕೆ ರೂ. 26–30 ಲಕ್ಷ ಹಣವನ್ನು ಒದಗಿಸಲಾಗಿದೆ.

ಇ) ಶಿವಮೊಗ್ಗ ತಾಲ್ಲೂಕಿನ ಕಲ್ಲಾಪಳ್ಳಿ ಗ್ರಾಮದ ಸರ್ವೆ ನಂಬರ್ 6 ರಲ್ಲಿನ 20 ಎಕರೆ ಜಮೀನನ್ನು ಈ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ.

ಈ) ಈ ಮಹಿಳಾ ಪಾಲಿಟೆಕ್ನಿಕ್‌ನ್ನು 1991–92ನೇ ಸಾಲಿನಿಂದ ಪ್ರಾರಂಭಿಸಲು ಉದ್ದೇಶಿಸಲಾಗಿದ್ದು, 5 ವರ್ಷಗಳ ಅವಧಿಯಲ್ಲಿ ಇದನ್ನು ಪೂರ್ಣ ಅಭಿವೃದ್ಧಿಗೊಳಿಸಲಾಗುವುದು.

ವಿಷಯ :– ನಗರಗಳಲ್ಲಿ ಮನೆಗಂದಾಯ ನಿಗದಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 618 (912)

ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) :– ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಆ) ನಗರಗಳಲ್ಲಿ ಮನೆಗಂದಾಯ ನಿಗದಿ ಮಾಡಲು ಸರ್ಕಾರ ಯಾವುದಾದರೂ ನಿರ್ದಿಷ್ಟ ಸೂತ್ರ ಅನುಸರಿಸಲು ಯೋಚಿಸುತ್ತಿದೆಯೇ ?

ಆ) ಶೇಕಡವಾರು ಅಥವಾ ವಿಸ್ತೀರ್ಣಕ್ಕೆ ನಿಗದಿತ ಮನೆಗಂದಾಯ ಈಗ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :–

ಆ) ಹೌದು.

ಆ) ಮನೆ ಕಂದಾಯವನ್ನು ಕರ್ನಾಟಕ ನಗರ/ಪುರಸಭೆ ಕಾಯ್ದೆ 1964 ರನ್ವಯ ವಸೂಲಿ ಮಾಡಲಾಗುತ್ತಿದೆ. ಈಗಿರುವ ಸೂತ್ರವನ್ನು ಆಭ್ಯಸಿಸಿ ನ್ಯೂನತೆಗಳನ್ನು ಸರಿಪಡಿಸಿ, ರಾಜ್ಯದ ಎಲ್ಲಾ ಸ್ಥಳೀಯ ಸಂಸ್ಥೆಗಳಿಗೆ ಅನ್ವಯವಾಗುವಂತಹ ನಿರ್ದಿಷ್ಟ ಸೂತ್ರವನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಒಂದು ಸಮಿತಿಯನ್ನು ರಚಿಸಲಾಗಿದೆ.

ವಿಷಯ :– ಪ್ರಸಕ್ತ ಸಾಲಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 619 (919)

ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಿ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಆ) ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಸ್ಥಾಪಿಸಲುದ್ದೇಶಿಸಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ವಿವರ ನೀಡುವುದು)

ಆ) ಹಾಲಿ ಇರುವ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೆ ಏರಿಸಲಾಗುವುದೋ ಅಥವಾ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆರೆಯಲಾಗುವದೋ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಸಚಿವರು) :–

ಆ 50 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮಂಜೂರು ಮಾಡುವ ಗುರಿ ಇದ್ದು ಜಿಲ್ಲಾವಾರು ಹಂಚಿಕೆಯನ್ನು ಈ ಕೆಳಗೆ ಕೊಡಲಾಗಿದೆ.